ದಿನಾಂಕಃ 05.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಸ್ . ಆರ್ . ಎಸ್ ವಕೀಲರಿಂದಃ**

ನನ್ನ ತಾಯಿಯ ಹೆಸರು ಮಂಜುಳಾ ಎಂದರೆ ನಿಜ. ಅವಳು ಈ ಪ್ರಕರಣದಲ್ಲಿ 1 ನೇ ಪ್ರತಿವಾದಿಯಾಗಿರುತ್ತಾಳೆಂದರೆ ನಿಜ. ನನ್ನ ಗಂಡನ ಹೆಸರು ಮಂಜುನಾಥ ಎಂದರೆ ನಿಜ. ನಾನು, ನನ್ನ ತಾಯಿ ಹಾಗೂ ನನ್ನ ಗಂಡ ಮಂಜುನಾಥ ಎಲ್ಲರೂ ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ನಿಜ. ಪ್ರಸ್ತುತ ದಾವೆಯನ್ನು ಹೂಡುವ ಕಾಲಕ್ಕೆ ನಾನು, 1 ನೇ ಪ್ರತಿವಾದಿ ಹಾಗೂ ನನ್ನ ಗಂಡ ಎಲ್ಲರೂ ಸೇರಿಕೊಂಡು ವಕೀಲರಿಗೆ ಮಾಹಿತಿ ನೀಡಲು ಹೋಗಿದ್ದೆವು ಎಂದರೆ ಸರಿಯಲ್ಲ. ವಕೀಲರಿಗೆ ಮಾಹಿತಿ ಕೊಡುವ ಕಾಲಕ್ಕೆ 1 ನೇ ಪ್ರತಿವಾದಿ ನಮ್ಮ ಜೊತೆ ವಾಸವಾಗಿರುತ್ತಾಳೆಂದು ಮಾಹಿತಿ ನೀಡಿರುವುದಿಲ್ಲ.

ನನ್ನ ಗಂಡ ಮಂಜುನಾಥ ಜರಾಕ್ಸ ಅಂಗಡಿಯನ್ನು ನಡೆಸುತ್ತಾನೆಂದರೆ ನಿಜ. ಸದರಿ ಅಂಗಡಿಯಿಂದ ಅಷ್ಟೊಂದು ಆದಾಯ ಇರುವುದಿಲ್ಲ ಎಂದರೆ ನಿಜ. ನನ್ನ ಗಂಡ ಮಂಜುನಾಥ ಮತ್ತು ಆತನ ಸಹೋದರನಿಗೆ ಕೇವಲ 02 ಎಕರೆ ಜಮೀನು ಇರುತ್ತದೆಂದರೆ ನಿಜ. ಜಮೀನಿನಿಂದ ಸಹ ಸ್ವಲ್ಪ ಉತ್ಪನ್ನ ಬರುತ್ತದೆಂದರೆ ನಿಜ. ನಾನು ಮನೆಗೆಲಸವನ್ನು ಮುಗಿಸಿಕೊಂಡು ಜರಾಕ್ಸ ಅಂಗಡಿಯಲ್ಲಿ ನನ್ನ ಗಂಡನಿಗೆ ಸಹಾಯ ಮಾಡುವುದಿಲ್ಲ. ನನ್ನ ಗಂಡನಿಗೆ ಜರಾಕ್ಸ ಅಂಗಡಿಯನ್ನು ಹೊರತುಪಡಿಸಿ ಬೇರೆ ಉದ್ಯೋಗ ಇರುವುದಿಲ್ಲ ಎಂದರೆ ನಿಜ. ಮೇಲೆ ಹೇಳಿದ 02 ಎಕರೆ ಜಮೀನಿನಲ್ಲಿ ನನ್ನ ಗಂಡ, ಆತನ ಸಹೋದರ ಮತ್ತು ನನ್ನ ಅತ್ತೆಯ ಮೂವರು ಜನರ ಹಿಸ್ಸೆ ಇರುತ್ತದೆಂದರೆ ನಿಜ. ಜರಾಕ್ಸ ಅಂಗಡಿಯಿಂದ ಬಂದ ಆದಾಯ ನಮ್ಮ ಕುಟುಂಬದ ನಿರ್ವಹಣೆಗೆ ಸಾಕಾಗುವುದಿಲ್ಲ ಎಂದರೆ ನಿಜ. ಆದ್ದರಿಂದ ನನ್ನ ಗಂಡ

ಪ್ರತಿವಾದಿಯರ ವಿರುದ್ಧ ದಾವೆ ಹಾಕಿದರೆ ಲಕ್ಷಾಂತರ ರೂಪಾಯಿ ಬರಬಹುದು ಎಂದು ಸೂಚಿಸಿದ್ದರಿಂದ ಪ್ರಸ್ತುತ ದಾವೆಯನ್ನು ಹಾಕಿರುತ್ತೇನೆಂದರೆ ನಿಜ.

ದಾವಾಸ್ತಿಯ ಸರ್ವೆ ನಂಬರ 331 ರಲ್ಲಿ ಪೋಟ ಹಿಸ್ಸಾ ಆದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ 331 ರಲ್ಲಿ ಜಮೀನು 01 ಎಕರೆಗೆ ಮಾರುಕಟ್ಟೆ ಬೆಲೆ 12 ಲಕ್ಷ ರೂ. ಇರುತ್ತದೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಾವಾಸ್ತಿ ಸರ್ವೆ ನಂಬರ 81 ರ ಮಾರುಕಟ್ಟೆಯ ಬೆಲೆಯು 01 ಕೋಟಿ ಇರುತ್ತದೆಂದರೆ ನನಗೆ ಗೊತ್ತಿಲ್ಲ. ಸದರಿ ಎರಡೂ ಆಸ್ತಿಗಳ ಮಾರುಕಟ್ಟೆಯ ಬೆಲೆ ನನ್ನ ತಾಯಿಗೆ ಗೊತ್ತಿರುತ್ತದೆಂದರೆ ನಿಜ.

ದಾವಾಸ್ತಿ ಸರ್ವೆ ನಂಬರ 81 ಕ್ಕೆ ಸಂಬಂಧಿಸಿದಂತೆ ಸನ್ 1980 ರಿಂದ ಇವತ್ತಿನವರೆಗೂ 2ನೇ ಪ್ರತಿವಾದಿಯ ಹೆಸರು ಪಹಣಿಪತ್ರಿಕೆಯಲ್ಲಿ ದಾಖಲು ಇರುತ್ತದೆಂದರೆ ನನಗೆ ಗೊತ್ತಿಲ್ಲ. ದಾವೆ ಹಾಕುವ ಪೂರ್ವದಲ್ಲಿ ಸದರಿ ಸರ್ವೆ ನಂಬರನ ಪಹಣಿಪತ್ರಿಕೆಯನ್ನು ತೆಗೆದು ನೋಡಲಾಗಿ 2 ನೇ ಪ್ರತಿವಾದಿಯ ಹೆಸರು ದಾಖಲು ಇರುವ ಬಗ್ಗೆ ಗೊತ್ತಾಗಿರುತ್ತದೆ. ಸನ್ 2008 ರಿಂದ ಇವತ್ತಿನವರೆಗೂ ಸಹ ಸರ್ವೆ ನಂಬರ 81 ರಲ್ಲಿಯ ಜಮೀನನ್ನು 2 ನೇ ಪ್ರತಿವಾದಿ ಸಾಗುವಳಿ ಮಾಡುತ್ತಾ ಇದ್ದಾನೆಂದರೆ ಸಾಕ್ಷಿಯು ನಾನು ಸಹ ಹೋಗಿ ಬಂದು ಮಾಡುತ್ತೇನೆಂದು ನುಡಿಯುತ್ತಾರೆ. ಸರ್ವೆ ನಂಬರ 81 ರ ಜಮೀನಿನ ಚಕ್ಕುಬಂದಿ ನನಗೆ ಹೇಳಲು ಅಗುವುದಿಲ್ಲ.

ಸರ್ವೆ ನಂಬರ 81 ರ ಕಂದಾಯವನ್ನು 2 ನೇ ಪ್ರತಿವಾದಿಯೇ ಪಾವತಿಸುತ್ತಾ ಬಂದಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಕಬ್ಜೆಯಲ್ಲಿ 2 ನೇ ಪ್ರತಿವಾದಿ ಇದ್ದು, ಆತನೇ ಸಾಗುವಳಿ ಮಾಡುತ್ತಿದ್ದು, ನಾನು ಕೇವಲ ಆತನ ಮನೆಗೆ ಹೋಗಿ ಬಂದು ಮಾಡುತ್ತೇನೆಂದರೆ ನಿಜ. ಸನ್ 2008 ರಿಂದ ನಾನು ಜಮೀನಿಗೆ

ಹೋಗಿಲ್ಲ. ಆದ್ದರಿಂದ ನನಗೆ ಸದರಿ ಜಮೀನಿನ ಚಕ್ಕುಬಂದಿ ಹೇಳಲು ಆಗುತ್ತಿಲ್ಲ ಎಂದರೆ ನಿಜ.

ದಾವಾಸ್ತಿ ಸರ್ವೆ ನಂಬರ 331ಅ/2 ಜಮೀನು ಸಹ 2 ನೇ ಪ್ರತಿವಾದಿಯ ಕಬ್ಜೆಯಲ್ಲಿದ್ದು, ಆತನ ಹೆಸರಿಗೆ ಪಹಣಿಪತ್ರಿಕೆ ಇರುತ್ತದೆಂದರೆ ನಿಜ. ಸದರಿ ಜಮೀನು ಸಹ 2 ನೇ ಪ್ರತಿವಾದಿ ಸಾಗುವಳಿ ಮಾಡುತ್ತಾ ಬಂದಿರುತ್ತಾನೆಂದರೆ ನಿಜ.

ನನ್ನ ಮದುವೆಯು ದಿ. 05.11.2018 ರಂದು ಆಗಿರುತ್ತದೆ ಎಂದರೆ ನಿಜ. ನನ್ನ ಮದುವೆಯಾದಾಗಿನಿಂದ ನನ್ನ ತಾಯಿಯ ಜೊತೆ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆಂದರೆ ನಿಜ. ಮದುವೆಯಾದ ನಂತರ ನಾನು ನನ್ನ ತಾಯಿಯ ಜೊತೆ ಮುನ್ಯಾಳ ಗ್ರಾಮಕ್ಕೆ ಹೋಗಿ ನೆಲೆಸಿರುತ್ತೇನೆಂದರೆ ಸಾಕ್ಷಿಯು ನಾನು, ನನ್ನ ತಾಯಿ ಹಾಗೂ ನನ್ನ ಗಂಡ ಹಿರೂರ ಗ್ರಾಮದಲ್ಲಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ.

ನಾನು 8 ನೇ ತರಗತಿಯವರೆಗೆ ಓದಿರುತ್ತೇನೆ. ನಾನು 8 ನೇ ತರಗತಿಯವರೆಗೆ ಮುನ್ಯಾಳ ಗ್ರಾಮದಲ್ಲಿ ಓದಿರುತ್ತೇನೆ. ನನ್ನ ತಂದೆ- ತಾಯಿ ಮದುವೆಯಾದ ನಂತರ ಮುನ್ಯಾಳ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ನಿಜ.

ನನ್ನ ತಂದೆಯ ಹೆಸರು ಅಪ್ಪಾಸಾಹೇಬ ಎಂದರೆ ನಿಜ. ನನ್ನ ತಂದೆಯ ತಂದೆ ಅಂದರೆ ಅಜ್ಜನ ಹೆಸರು ಯಲ್ಲನಾಯಕ ಇರುತ್ತದೆ. ನನ್ನ ತಾಯಿಯ ತಂದೆಯ ಹೆಸರು ಶಿವನಾಯಕ ಇರುತ್ತದೆ. ಅಣ್ಣಾಸಾಹೇಬ ಇತನು ನನ್ನ ತಾಯಿಯ ಅಜ್ಜನಿದ್ದು, ನನಗೆ ಮುತ್ತಜ್ಜನಾಗಬೇಕು. ಆತನಿಗೆ ತಂಗೆವ್ವ ಮತ್ತು ನೀಲಾಬಾಯಿ ಎಂಬ ಇಬ್ಬರು ಹೆಂಡಂದಿರರು ಎಂದರೆ ನಿಜ. ಮೊದಲನೇಯ ಹೆಂಡತಿ ತಂಗೆವ್ವ ಇದ್ದು, ಅವಳು ತೀರಿಕೊಂಡ ನಂತರ ನೀಲಾಬಾಯಿಯನ್ನು ಮದುವೆಯಾಗಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಶಿವನಾಯಕ ಮೊದಲನೇ ಹೆಂಡತಿ ತಂಗೆವ್ವಳ ಮಗ ಇರುತ್ತಾನೆಂದರೆ ನಿಜ. 2 ನೇಪ್ರತಿವಾದಿಯು 2 ನೇ ಹೆಂಡತಿ ನೀಲಾಬಾಯಿಯ ಮಗ ಇರುತ್ತಾನೆಂದರೆ ನಿಜ.

ನನ್ನ ತಂದೆ ತಾಯಿಯ ಮದುವೆಯು ದಿ.29.04.1999 ರಂದು ಮುನ್ಯಾಳ ಗ್ರಾಮದಲ್ಲಿ ಆದ ಬಗ್ಗೆ ಗೊತ್ತಿಲ್ಲ. ಸನ್ 1990 ರಿಂದ ನನ್ನ ತಂದೆ ಬದುಕಿರುವವರೆಗೂ ಮುನ್ಯಾಳ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ನಿಜ. ನನ್ನ ತಂದೆಗೆ 05 ಜನ ಸಹೋದರರು ಇರುತ್ತಾರೆಂದರೆ ನಿಜ. ಅವರ ಕುಟುಂಬಕ್ಕೆ ಕೇವಲ 3-4 ಎಕರೆ ಜಮೀನು ಇರುತ್ತದೆಂದರೆ ಸಾಕ್ಷಿಯು 10 ಎಕರೆ ಜಮೀನು ಇರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆ ಅಪ್ಪಾಸಾಹೇಬ ಕುಡಿತದ ಚಟಕ್ಕೆ ಬಲಿಯಾಗಿದ್ದ ಎಂದರೆ ನಿಜ. ನನ್ನ ತಂದೆ ದಿ. 11.05.2010 ರಂದು ಕುಡಿದ ನಿಶೆಯಲ್ಲಿಯೇ ತೀರಿಕೊಂಡಿರುತ್ತಾನೆಂದರೆ ಸಾಕ್ಷಿಯು ಹೃದಯಾಘಾತವಾಗಿ ಮರಣಹೊಂದಿರುತ್ತಾನೆಂದು ನುಡಿಯುತ್ತಾರೆ. ಆತನು 29 ನೇ ವಯಸ್ಸಿ ನಲ್ಲಿ ಮೃತಪಟ್ಟಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ವಯಸ್ಸು 5-6 ವರ್ಷಗಳು ಇರಬಹುದು ಎಂದರೆ ನಿಜ. ನನ್ನ ತಂದೆ ಏನು ಉದ್ಯೋಗ ಮಾಡುತ್ತಿದ್ದರು, ಕುಟುಂಬದ ನಿರ್ವಹಣೆಯನ್ನು ಹೇಗೆ ಮಾಡುತ್ತಿದ್ದರು ಎಂಬುದರ ಬಗ್ಗೆ ನನ್ನ ತಾಯಿಗೆ ಗೊತ್ತು ಎಂದರೆ ನಿಜ. ನನ್ನ ತಂದೆಯ ಕುಟುಂಬಕ್ಕೆ ಇದ್ದ ಜಮೀನನ್ನು ಆತನ ಸಹೋದರರು ಕಬ್ಜಾ ವಹಿವಾಟನ್ನು ಮಾಡುತ್ತಿದ್ದರು ಎಂದರೆ ನಿಜ. ನನ್ನ ತಂದೆ ಏನು ಉದ್ಯೋಗ ಮಾಡುತ್ತಿದ್ದರು ಎಂದು ನನ್ನ ತಾಯಿಗೆ ಗೊತ್ತು ಎಂದರೆ ನಿಜ. ನನ್ನ ತಂದೆ ಕುಡಿತದ ಚಟಕ್ಕೆ ಬಲಿಯಾಗಿದ್ದರಿಂದ ಊರ ತುಂಬ ಸಾಲ ಮಾಡಿಕೊಂಡು ತಿರುಗಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ನನ್ನ ತಾಯಿಗೆ ಗೊತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ನನ್ನ ತಾಯಿಯನ್ನು ಹಾಗೂ ನನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಅಜ್ಜ ಶಿವನಾಯಕನನ್ನು ತಂಗೆವ್ವ ಮತ್ತು ಬಾಳಾಸಾಹೇಬರವರು ದತ್ತಕಕ್ಕೆ ತೆಗೆದುಕೊಂಡಿದ್ದರು ಎಂದರೆ ನಿಜ. ಸದರಿ ತಂಗೆವ್ವ ಮತ್ತು ಬಾಳಾಸಾಹೇಬನಿಗೆ ಯಾವುದೇ ಸಂತಾನ ಇರಲಿಲ್ಲ ಎಂದರೆ ನಿಜ. ದಾವಾಸ್ತಿಗಳು ಶಿವನಾಯಕನಿಗೆ ದತ್ತಕ ಕುಟುಂಬದಿಂದ ಬಂದ ಆಸ್ತಿಗಳು ಇರುತ್ತವೆ ಎಂದರೆ ನಿಜ. ಸದರಿ ದಾವಾಸ್ತಿಗಳು ಶಿವನಾಯಕನ ಸ್ವತಂತ್ರ ಆಸ್ತಿಗಳು ಎಂದರೆ ನಿಜ. ಶಿವನಾಯಕನನ್ನು ದತ್ತಕ ಪಡೆಯುವಾಗ ನನ್ನ ತಾಯಿ ಇನ್ನೂ ಜನಿಸಿರಲಿಲ್ಲ ಎಂದರೆ ನಿಜ.

ನನ್ನ ತಂದೆಯವರ ಸಹಿಯನ್ನು ನೋಡಿ ಗುರುತಿಸುತ್ತೇನೆ. ನನ್ನ ತಂದೆಯವರ ಸಹಿ ಇರುವ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 2 ನೇ ಪ್ರತಿವಾದಿ ಹಾಜರಾಗಿ ತನ್ನ ಪ್ರತಿವಾದ ಪತ್ರದೊಂದಿಗೆ ಹಾಜರುಪಡಿಸಿದ ಕರಾರುಪತ್ರಗಳ ಬಗ್ಗೆ ವಕೀಲರು ನನಗೆ ಹೇಳಿದ್ದು, ನಾನು ಅವುಗಳನ್ನು ನೋಡಿ , ಅವುಗಳಲ್ಲಿರುವ ಸಹಿಗಳು ನನ್ನ ಅಜ್ಜ ಹಾಗೂ ನನ್ನ ತಾಯಿಯ ಸಹಿಗಳು ಆಗಿರುವುದಿಲ್ಲ ಎಂದು ನಮ್ಮ ವಕೀಲರಿಗೆ ಹೇಳಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನಮ್ಮ ಅಜ್ಜ ಶಿವನಾಯಕನ ಸಹಿಗಳು ಇರುವುದಿಲ್ಲ. ನನ್ನ ಅಜ್ಜ ಶಿವನಾಯಕ ಸಹಿ ಇರುವ ಯಾವುದಾರೂ ಸರಕಾರಿ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ನಿಜ.

ದಿ.26.05.2009 ರಂದು ನನ್ನ ಅಜ್ಜ ಶಿವನಾಯಕ ಹಾಗೂ ನನ್ನ ತಾಯಿ ಸ್ವಖುಷಿಯಿಂದ 2ನೇ ಪ್ರತಿವಾದಿಯ ಹೆಸರಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಿ.26.05.2009 ರಂದು ಸದರೀಯವರು ಹಣ ಸ್ವಿಕರಿಸಿದ ಬಗ್ಗೆ ಸ್ಟ್ಯಾಂಪ್ ಪೇಪರ ಮೇಲೆ

ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸನ್ 2006 ರಿಂದ 2009 ರಲ್ಲಿ ನನ್ನ ವಯಸ್ಸು 5-7 ವರ್ಷ ಇತ್ತು ಎಂದರೆ ನಿಜ. ಆದ್ದರಿಂದ ಮೇಲೆ ಹೇಳಿದ ದಾಖಲೆಗಳಲ್ಲಿ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗುರುತಿಸಲು ಆಗುವುದಿಲ್ಲ ಎಂದರೆ ನಿಜ. 2 ನೇ ಪ್ರತಿವಾದಿಯಿಂದ ಹಣ ಪಡೆಯುವ ಉದ್ದೇಶದಿಂದ ಸದರಿ ಮೇಲೆ ಹೇಳಿದ ದಾಖಲೆಗಳಿಗೆ ನನ್ನ ಅಜ್ಜನಾಗಲೀ ಅಥವಾ ನನ್ನ ತಾಯಿಯಾಗಲಿ ಸಹಿ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ